ಅಂತರಂಗದಲ್ಲಿ ನೆಲೆ ನಿಂತಿರುವ ಕೇಡು, ನಿತ್ಯವೂ ಸೆಳೆದು ಕಾಡುವ ಆದಿಮವಾದ ಕಾಮ, ಅದರ ಟಿಸಿಲಿನಲ್ಲಿ ಚಿಗುರೊಡೆದ ಸೂಳೆಗಾರಿಕೆ, ನಮ್ಮದೇ ನೆರಳಿನ ಹಾಗೆ ನಮ್ಮ ಬೆನ್ನಿಗೆ ಬಿದ್ದು ಕೆಣಕುವ ಸಾವು, ಮೋಹಿನಿಯಂತಹ ಜೂಜು, ಇವೆಲ್ಲವನ್ನೂ ಮೀರಿದ, ಸದಾ ನಮ್ಮ ಎದೆಯಲ್ಲಿ ಜಿನುಗುವ ಗಳಿಗೆಗಾಗಿ ಕಾಯುತ್ತಿರುವ ಅಂತಃಕರಣ ಎಲ್ಲವೂ ಯೋಗಪ್ಪನವರ್ ಅವರ ಬರವಣಿಗೆಯ ಜೀವದ್ರವ್ಯಗಳಾದವು. 'ಪ್ರೀತಿ ಎಂಬುದು ಚಂದ್ರನ ದಯೆ', '**Blisters**', 'ಶೋಧ' ಕೃತಿಗಳಲ್ಲಿ ಈ ಜೀವದ್ರವ್ಯ ಹರಿದಾಡಿದೆ. ಕಥಾವಸ್ತುಗಳ ಹಂಗನ್ನು ತೊರೆದು ರಚನೆಯಾದ ಬರವಣಿಗೆಗಳು ಇವು. ಮಾಯಾವಾಸ್ತವವಾದದ ಕಥನಗಳ ಸುಖವನ್ನು ಅನುಭವಿಸಬೇಕಾದರೆ 'ಪ್ರೀತಿ ಎಂಬುದು ಚಂದ್ರನ ದಯೆ'ಯನ್ನು ಓದಬೇಕು. ಅಲ್ಲಿನ ಭಗ್ನ ಪ್ರೇಮಿಯೊಬ್ಬಳ ಕಹಿರಹಿತವಾದ ಆತ್ಮನಿವೇದನೆಯ ಮಾತುಗಳು ನಮ್ಮನ್ನು ತೊಟ್ಟಿಲಲ್ಲಿ ಹಾಕಿ ತೂಗುತ್ತವೆ. ಅವಳು ತೀರಿಹೋದ ಅನಂತರ ಅವಳ ಪ್ರಿಯಕರನಲ್ಲಿ ಉಂಟಾಗುವ ಪಶ್ಚಾತ್ತಾಪದ ಭಾವನೆ ಓದುಗರಾದ ನಮಗೆ ಪಿಚ್ಚೆನ್ನಿಸುತ್ತದೆ. 'ಎಲ್ಲ ಪಶ್ಚಾತ್ತಾಪಗಳು ನಾವು ಬಲಿ ತೆಗೆದುಕೊಂಡ ಬಲಿಪಶುವಿನ ಎದುರು ಕುಳಿತು ಕಣ್ಣೀರು ಹಾಕುವ ದುಷ್ಟ ಧಾರ್ಮಿಕ ಕ್ರಿಯೆ ಅಷ್ಟೆ!' ಎಂಬ ಸತ್ಯದ ದರ್ಶನ ಮಾಡಿಸುತ್ತದೆ.

ಲೇಖಕನ ಜೀವನಾನುಭವ ಮತ್ತು ಅವನು ಬಳಸುವ ಸೂಕ್ಷ್ಮವಾದ ಭಾಷೆಯು ಅವನಿಗೆ ಘಟನೆಗಳನ್ನು ರೂಪಕಗೊಳಿಸುವ ಶಕ್ತಿಯನ್ನು ನೀಡುತ್ತವೆ. ಮನುಷ್ಯನ ಒಳಗೇ ಅಡಗಿ ಕುಳಿತಿರುವ ಪಿತೃಹತ್ಯಾ ದಾಹವನ್ನು '**Return Journey**' ಎನ್ನುವ ರೂಪಕದಲ್ಲಿ ಕಾಣಿಸಿದ್ದಾರೆ. ತಂದೆಯ ಶವಸಂಸ್ಕಾರಕ್ಕೆಂದು ಹೋದ ಮಗನ ಕತೆಯಿದು. ತಂದೆಯ ಶವಕ್ಕೆ ಅಗ್ನಿಸ್ಪರ್ಶಮಾಡಿಸಿ ಬಂಧು ಬಳಗದವರೆಲ್ಲ ಊರ ಕಡೆಗೆ ಹೋಗುತ್ತಾರೆ. ಮಗ ಮಾತ್ರ ಅಲ್ಲಿಯೇ ಹರಿಯುತ್ತಿದ್ದ ನದಿಯನ್ನು ದಾಟಿ, ಪಕ್ಕದ ಹಳ್ಳಿಯೊಂದಕ್ಕೆ ಹೋಗಿ ಅಲ್ಲಿ ಕಂಠಪೂರ್ತಿ ಹೆಂಡ ಕುಡಿಯುತ್ತಾನೆ. ಅಲ್ಲಿಯೇ ಒಂದು ಕೋಳಿಯನ್ನು ಖರೀದಿಸುತ್ತಾನೆ. ಊರಿಗೆ ಮರಳಿ ಹೋಗುವ ದಾರಿಯಲ್ಲಿ ತಂದೆಯ ಚಿತೆ ಇನ್ನೂ ಉರಿಯುತ್ತಿರುವುದನ್ನು ನೋಡುತ್ತಾನೆ. ಆ ಚಿತೆಯಲ್ಲಿ ತನ್ನೊಂದಿಗೆ ತಂದಿದ್ದ ಜೀವಂತ ಕೋಳಿಯನ್ನು ಎಸೆಯುತ್ತಾನೆ. ಅದು ಬೆಂದ ಅನಂತರ ಅದರ ಮಾಂಸವನ್ನು ತಿನ್ನಲು ಪ್ರಾರಂಭಿಸುತ್ತಾನೆ. ನಿಶೆ ಇಳಿದು ಎಚ್ಚರವಾದಾಗ ಅವನು ತನ್ನ ತಂದೆಯ ಹೆಣದ ದೇಹದ ಅರ್ಧದಷ್ಟು ಮಾಂಸವನ್ನು ತಿಂದಿರುತ್ತಾನೆ.

'ಶೋಧ' ಕಾದಂಬರಿಯಲ್ಲಂತೂ ತಮ್ಮೆಲ್ಲ ಪ್ರತಿಭಾ ಸಂಪನ್ನತೆಯನ್ನು ಬಳಸಿ ವಿಶ್ವಾತ್ಮಕವಾದ ರೂಪಕವೊಂದನ್ನು ಕಟ್ಟಿಕೊಟ್ಟಿದ್ದಾರೆ. ಇಲ್ಲಿ ಯಾವ ಪಾತ್ರಗಳಿಗೂ ಹೆಸರುಗಳಿಲ್ಲ. ಸ್ಥಾವರವನ್ನು ಛಿದ್ರಗೊಳಿಸುವ ಶುದ್ಧ ಅಂತಃಕರಣದ ವ್ಯಕ್ತಿಯನ್ನು ಪೊಲೀಸ್ ಅಧಿಕಾರಗಳು ಬೇಟೆಯಾಡಲು ಹೊರಟ ಕತೆ ಇಲ್ಲಿದೆ. ಈ ಎರಡು ಶಕ್ತಿಗಳ ಮಧ್ಯದಲ್ಲಿ ನಲುಗಿ ಹೋಗುವ ಸಾಮಾನ್ಯ ಮನುಷ್ಯನೂ ಇಲ್ಲಿದ್ದಾನೆ. ಬೇಟೆಯಾಡಲು ಬಂದ ಪೊಲೀಸನನ್ನು ಆ ಶುದ್ಧಾಂತಃಕರಣದ ವ್ಯಕ್ತಿಯೇ ಕಂಬಳಿಯ ಮೇಲೆ ಕೂಡ್ರಿಸಿ ಊಟ ಮಾಡಿಸುತ್ತಾನೆ; ಸುಂದರವಾದ ಭರಣಿಗಳನ್ನು ಮಾರುವ ವ್ಯಕ್ತಿಯಾಗಿ ಕಾಣಿಸುತ್ತಾನೆ; ಹಿಜಡಾಗಳ ಮಧ್ಯದಲ್ಲಿ ನುಸುಳಿ ಪೊಲೀಸರ ಎದುರಿಗೇ ಪಾರಾಗಿ ಹೋಗುತ್ತಾನೆ; ತನ್ನ ಇರುವಿಕೆಯ ಸಾಕ್ಷಿಯಂತಿದ್ದ ತನ್ನ ಶಲ್ಲೆಯನ್ನು ಪೊಲೀಸರಿಂದ ಕಿತ್ತುಕೊಂಡು ಪರಾರಿಯಾಗುತ್ತಾನೆ. ಮಲಮೂತ್ರಗಳ ಗುಂಡಿಗಳಲ್ಲಿ ಕೆಲಸ ಮಾಡುತ್ತಿದ್ದವನ ಮಲ ಮೆತ್ತಿದ ಮೈಯನ್ನು ತನ್ನ ಶಲ್ಲೆಯಿಂದ ಒರೆಸಿ ಕಣ್ಮರೆಯಾಗುತ್ತಾನೆ; ಶಿವಲಿಂಗ ಗುಡಿಯ ಆವರಣದಲ್ಲಿ ಶಲ್ಲೆಹೊದ್ದು ಮಲಗಿದ ಹಲವಾರು ಆರೂಢರ ಮಧ್ಯದಲ್ಲಿ ಕಾಣಿಸಿಕೊಳ್ಳುತ್ತಾನೆ; ಕೊನೆಗೆ ಬಾದಾಮಿ ಬನಶಂಕರಿ ಜಾತ್ರೆಯಲ್ಲಿ ಹೊಂಡದ ದಂಡೆಯ ಮೇಲೆ ಕಾಣಿಸಿಕೊಂಡು ಪೊಲೀಸ್ ಹೊಡೆದ ಗುಂಡಿನಿಂದ ತಪ್ಪಿಸಿಕೊಳ್ಳುತ್ತಾನೆ. ಹೀಗೆ ಈ ವಿಶ್ವದಲ್ಲಿ ಕೇಡು ಒಡ್ಡುವ